ಶ್ರೀ ಜಗದೀಶ್ ಶೆಟ್ಟರ್: ಆ ಇಲಾಖೆಗೆ ಇಬ್ಬರು ಸಚಿವರಿದ್ದಾರೆ. ಒಬ್ಬರು ಇಲ್ಲಿ ಕುಳಿತುಕೊಳ್ಳಬಹುದಲ್ಲ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಕೋಲಾರದ ಬಗ್ಗೆ ಹೇಳಿಕೆ ಮಾಡಿಸುತ್ತೇನೆ ಎಂದು ಹೇಳಿದ್ದೀರಿ, ಈಗ ಮಂತ್ರಿಗಳು ತಯಾರಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: 'As per the list of Business' ಕುಡಿಯುವ ನೀರಿನ ವಿಚಾರ ಕೊನೆಯಲ್ಲಿದೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ನನ್ನನ್ನು ಕೇಳಿದರು, ಈ ಚರ್ಚೆಯನ್ನು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳಬಹುದು ಎಂದು ನಾನು ಹೇಳಿದೆ.

ಅಧ್ಯಕ್ಷರು: ಅರ್ಬನ್, ರೂರಲ್ ವಾಟರ್ ಬಗ್ಗೆ ಒಂದೊಂದು ಸಲ ಮಾತನಾಡುವುದು ಸರಿ ಇರುವುದಿಲ್ಲ. ಈಗ ಐದು ನಿಮಿಷದಲ್ಲಿ ತೀರ್ಮಾನ ಮಾಡೋಣ. ಅರ್ಬನ್ ಮಂತ್ರಿಗಳಿದ್ದಾರೆ. ಅದನ್ನು ನಾನು ಒಪ್ಪಿಕೊಂಡೆ. ಇದೊಂದು ಸಲ ಅದೊಂದು ಸಲ ಮಾತನಾಡುವುದಕ್ಕಾಗುವುದಿಲ್ಲ. ಎರಡನ್ನೂ ಜೊತೆಯಲ್ಲಿ ಸೇರಿಸಿ ಮಾತನಾಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ಕೋಲಾರದಲ್ಲಿ ಕೆರೆ ಹೂಳೆತ್ತುವ ಬಗ್ಗೆ ಹೇಳಿಕೆಯನ್ನು ನಾಳೆ ಮಾಡಿಸುತ್ತೇನೆಂದು ಹೇಳಿದ್ದೀರಿ. ಈಗ ಮಾನ್ಯ ಮಂತ್ರಿಗಳು ಹೇಳಿಕೆ ಮಾಡುವುದಕ್ಕೆ ತಯಾರಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟೆ: ಮಾನ್ಯ ಅಧ್ಯಕ್ಷರೇ, ನಿನ್ನೆ ಹೇಳಿಕೆ ಮಾಡಬೇಕು ಎಂದು ರಾತ್ರಿ ಎಂಟು ಗಂಟೆಯವರೆಗೆ ನಿಮ್ಮ ಸಲುವಾಗಿ ಕಾಯುತ್ತಿದ್ದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಎಂಟು ಗಂಟೆಯವರೆಗೆ ಕಾದರೂ ಮಾನ್ಯ ಸದಸ್ಯರು ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ದಯವಿಟ್ಟು ಶ್ವೇತ ಪತ್ರದ ಮೇಲೆ ವಿವರವಾದ ಚರ್ಚೆ ಆಗಲಿ ಎಂದು ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ, ಹೇಳುತ್ತೇವೆ ಎಂದಿದ್ದರು. ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಇದರ ಬಗ್ಗೆ ಸಹ ಅವರು ಹೇಳಬೇಕು.

ಅಧ್ಯಕ್ಷರು: ಅದರ ಬಗ್ಗೆ ಬಿಎಸಿ ಮೀಟಿಂಗ್‌ನಲ್ಲಿ ಮಾತನಾಡೋಣ

4. ಗಮನ ಸೆಳೆಯುವ ಸೂಚನೆ:

:ಕೋಲಾರದ ನೀರಿನ ಸಮಸ್ಯೆ:

ಶ್ರೀ ಕೆ. ಶ್ರೀನಿವಾಸಗೌಡ: ಕುದವನಹಳ್ಳಿ (ಕೋಲಾರ): ಮಾನ್ಯ ಅಧ್ಯಕ್ಷರೇ, 'ಕೋಲಾರದ ನೀರಿನ ಸಮಸ್ಯೆ ಕುರಿತು ನಾನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ"

+ಶ್ರೀ ಬಿ.ಬಿ. ಚಿಮ್ಮನಕಟ್ಟೆ: ಮಾನ್ಯ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಕೋಲಾರ ನಗರಕ್ಕೆ ಒಂದು ಹೊಸ ನೀರು ಸರಬರಾಜು ಯೋಜನೆಯನ್ನು ತಯಾರಿಸಿ, ಈ ಯೋಜನೆಯಡಿಯಲ್ಲಿ 'ಅಮ್ಮೇರಹಳ್ಳಿ' ಮತ್ತು 'ಮಡೇರಹಳ್ಳಿ' ಕೆರೆಗಳಲ್ಲಿ ಹೂಳೆತ್ತುವ ಕೆಲಸಕ್ಕೆ ಆಗುವ ವೆಚ್ಚವನ್ನು ಸೇರಿಸಲಾಗುವುದು. ಈ ತರಹ ತಯಾರಿಸುವ ಅಂದಾಜು ಹುಡ್ಕೋ ಅಥವಾ ಎಲ್.ಐ.ಸಿ.ನಿಂದ ಹಣ ಪಡೆದು ಕಾರ್ಯಗತ ಮಾಡಲು ಪರಿಶೀಲಿಸಲಾಗುವುದು. ಹಾಗೂ ಈ ಎರಡೂ ಕೆರೆಗಳ ಹೂಳೆತ್ತುವ ಕೆಲಸಕ್ಕೆ ಸುಮಾರು ರೂ. ಒಂದು ಕೋಟಿಗಳಿಗಿಂತ ಹೆಚ್ಚು

ಹಣ ಬೇಕಾಗುತ್ತದೆ. ಹೂಳೆತ್ತುವ ಕಾಮಗಾರಿಗಳನ್ನು ತೆಗೆದುಕೊಳ್ಳಲು ಯೋಜನೆಯ ಮಂಜೂರಾತಿ ಆಗಿ ಟೆಂಡರ್‌ಗಳನ್ನು ಕರೆದು ಮಾಡಬೇಕಾಗುತ್ತದೆ. ಆದ್ದರಿಂದ ಈ ವರ್ಷದಲ್ಲಿ ಮಳೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ಮಾಡಿ ಮುಗಿಸಲು ಕಷ್ಟಸಾಧ್ಯ. ಆದ್ದರಿಂದ ಸದ್ಯದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕೊಳವೆ ಬಾವಿಗಳನ್ನು ಕೊರೆದು ಯಂತ್ರಗಳನ್ನು ಅವಳಡಿಸಿ ನೀರನ್ನು ಸರಬರಾಜು ಮಾಡಲಾಗುವುದು.

ಅಧ್ಯಕ್ಷರು: ಈಗ ಅವರು ಹೇಳಿದರಲ್ಲ. ಅಲ್ಲಿ ತಾತ್ಕಾಲಿಕವಾಗಿ ಕೊಳವೆ ಬಾವಿಗಳನ್ನು ಹಾಕಿ ಅದನ್ನು ಸರಿಪಡಿಸುತ್ತೇವೆ ಎಂದು ಹೇಳುತ್ತಿದ್ದಾರಲ್ಲ.

ಶ್ರೀ ಸಿ.ಭೈರೇಗೌಡ: ಸ್ವಾಮಿ, ಇದಕ್ಕೆ ಟೆಂಡರ್ ಕರೆಯಬೇಕಾಗಿಲ್ಲ. ಏಕೆಂದರೆ ನನಗೆ ಎಲ್ಲಾ ವಿಚಾರ ಗೊತ್ತಿರುವುದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಈ ಯಂತ್ರಕ್ಕೆ ಒಂದು ಗಂಟೆಗೆ ಇಷ್ಟು ಎಂದು ಹೇಳಿ ಗಂಟೆಯ ಮೇಲೆ ಅದನ್ನು ನಿಗದಿ ಮಾಡಿದ್ದಾರೆ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಟೆಂಡರ್ ಕರೆದು ಗಂಟೆಗೆ ಇಷ್ಟು ಎಂದು ಮಾಡಿದ್ದಾರೆ. ಆಮೇಲೆ ಉಳಿದಿರತಕ್ಕದ್ದನ್ನು ಹೊರಗಡೆ ಸಾಗಿಸಬೇಕಾಗಿದ್ದರೆ ಲಾರಿ ಬಾಡಿಗೆ ಕೊಟ್ಟು ಮಾಡಬಹುದಾಗಿದೆ. ಅಲ್ಲದೆ ಅದನ್ನೂ ಕೂಡ ಒಂದು ಶಾರ್ಟ್‌ಟೆಂಡರ್ ಕರೆದು ಮಾಡುವುದಕ್ಕೆ ಸಾಧ್ಯ ಇದೆ. ಈ ವರ್ಷವೇ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಹೇಳಿಕೆ ಕೊಟ್ಟಿದ್ದಾರೆ. ನಾವು ಇದಕ್ಕೆ ಏನು ಹೇಳಬೇಕು? ಹಾಗಾದರೆ ಈ ವರ್ಷ ಅಲ್ಲಿರತಕ್ಕಂತಹ ಜನರು, ನೀರು ಕುಡಿಯುವುದೇ ಬೇಡವಾ? ಮಳೆ ಬಂದರೆಲ್ಲಿ ನೀರು ನಿಂತುಕೊಳ್ಳುತ್ತದೆ. ಹೂಳು ಎತ್ತಿದರೆ ನೀರು ನಿಲ್ಲುತ್ತದೆ ಎಂದು ಹೇಳಿದರೆ, ಬಹಳ ಸರಳವಾಗಿರತಕ್ಕಂತಹ ಪ್ರಶ್ನೆಯನ್ನು ಇವರು ಬಹಳ ಜಟಿಲ ಸಮಸ್ಯೆಯನ್ನಾಗಿ ಮಾಡತಕ್ಕಂಥ ಒಂದು ಹೇಳಿಕೆ ಕೊಟ್ಟರೆ ನಾವು ಇದಕ್ಕೆ ಏನು ಹೇಳುವುದು? ಹಾಗಾದರೆ, ಕೋಲಾರದ ಜನರು ಕೋಲಾರದ ನಾಗರೀಕರು ಈ ವರ್ಷ ನೀರು ಕುಡಿಯುವುದು ಬೇಕಾಗಿಲ್ಲ. ಅವರಿಗೆ ನೀರು ಕೊಡುವುದಿಲ್ಲ ಎಂದು ಒಂದೇ ಮಾತಿನಲ್ಲಿ ಉತ್ತರ ಕೊಟ್ಟು ಬಿಡಿ. ನಾವು ಅದೇ ಮಾತನ್ನು ಅವರಿಗೂ ಕೂಡ ಹೇಳುತ್ತೇವೆ. ಆಮೇಲೆ ಅಲ್ಲಿಯ ಜನರು ನಿಮ್ಮನ್ನು ಚನ್ನಾಗಿ ವಿಚಾರಿಸಿಕೊಳ್ಳುತ್ತಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ನಾವು ವಿಶೇಷವಾಗಿ ನಮ್ಮ ರೆಗ್ಯುಲರ್ ಸ್ಕೀಮ್‌ನೊಳಗಂತೂ ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಇದರಿಂದ ಸುಮಾರು ಒಂದು ಕೋಟಿ ರೂಪಾಯಿಗಳ ಯೋಜನೆ ಕೂಡ ಮಂಜೂರು ಆಗಿಲ್ಲ. ಈಗ ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಮಾಡಬೇಕು ಎಂದರೆ ನಾವು ಅದಕ್ಕೆ ಬರ ಪರಿಹಾರ ನಿಧಿಯಿಂದ ಹಣವನ್ನು ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಒಂದು ಕೋಟಿ ರೂಪಾಯಿಗಳ ಹಣವನ್ನು ಹುಡ್ಕೋದಿಂದ ಸಾಲದ ರೂಪದಲ್ಲಿ ತೆಗೆದುಕೊಳ್ಳಬೇಕಾದಂತಹ ವ್ಯವಸ್ಥೆಯನ್ನೂ ಕೂಡ ನಾನು ಮಾಡುತ್ತೇನೆ. ಆದರೆ ಇದು ಬಹುತೇಕ ಇನ್ನು ಎರಡು ಮೂರು ತಿಂಗಳು ಲೇಟ್ ಆಗಬಹುದು. ಅದಾದ ಮೇಲೆ ಡೀಸಿಲ್ಟಿಂಗ್ ಆಫ್ ಟ್ಯಾಕ್ಸ್ ಆಗಲೀ ಮತ್ತೊಂದು ಆಗಲೀ ನಾವು ತೆಗೆದುಕೊಳ್ಳಬಹುದು.

ಶ್ರೀ ಭೈರೇಗೌಡ: ಸ್ವಾಮಿ ಅಲ್ಲಿ ಅಷ್ಟೋ, ಇಷ್ಟೋ ಸ್ವಲ್ಪ ನೀರು ಬಂದರೂ ಕೂಡ ಆಮೇಲೆ ಕೆರೆಯಲ್ಲಿ ಹೂಳು ಎತ್ತಲು ಆಗುವುದಿಲ್ಲ. ಗಾಡಿಗಳು ಕೂಡ ಓಡಾಡಲು ಕಷ್ಟ.

ಲಾರಿಗಳು ಮತ್ತು ಟ್ರಾಕ್ಟರ್‌ಗಳು ಅಂತೂ ಕೆರೆ ಅಂಗಳದಲ್ಲಿ ಓಡಾಡುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಅಲ್ಲಿ ಮಳೆ ಇಲ್ಲದೇ ಇರುವಾಗ ಈ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದಲೇ ನಾವು ಹೇಳುತ್ತಿರತಕ್ಕದ್ದು, ನೀವು ಯಾವುದಾದರೂ ಒಂದು ಯೋಜನೆಯಲ್ಲಿ ಈಗ ಅಲ್ಲಿಗೆ ಎಷ್ಟು ಹಣ ಬೇಕಾಗಿದೆಯೋ ಅಷ್ಟು ಹಣವನ್ನು ಬಿಡುಗಡೆ ಮಾಡಿ. ಉಳಿದಿರತಕ್ಕಂಥಾದ್ದನ್ನು ಆಮೇಲೆ ನೀವು 60 ಲಕ್ಷ ಯೋಜನೆಯಲ್ಲೋ ಅಥವಾ 60 ಕೋಟಿಯ ಯೋಜನೆಯಲ್ಲೋ ನಿಧಾನವಾಗಿ ಮಾಡಿ. ಆದರೆ ಹೂಳು ಎತ್ತುವಂತಹ ಕೆಲಸ ತತ್‌ಕ್ಷಣ ಆಗಬೇಕಾಗಿರತಕ್ಕದ್ದು. ಇದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳಿಗೆ ನಾನು ಕೂಡ ನಿಮ್ಮ ಪರವಾಗಿ ವಿನಂತಿ ಮಾಡಿಕೊಂಡು ಹೇಳುತ್ತೇನೆ. ಈ ಬರ ಪರಿಹಾರ ನಿಧಿಯಿಂದ ಈಗ ಇಮ್ಮಿಡಿಯಟ್ ಆಗಿ ಕನಿಷ್ಟ 25 ಲಕ್ಷವೋ ಅಥವಾ 50 ಲಕ್ಷವೋ ಕೊಡುವುದಕ್ಕೆ ಸಾಧ್ಯತೆ ಇದೆ ಎಂದು ನೋಡಿ ನಿಮ್ಮ ಪರವಾಗಿ ನಾನೇ ಅವರಲ್ಲಿ ವಿನಂತಿ ಮಾಡಿಕೊಂಡು ಅದರ ಮೂಲಕ ಆ ಕಾಮಗಾರಿಯನ್ನು ತೆಗೆದುಕೊಳ್ಳಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಒಂದು ನಿಮಿಷ ಈ ಕಡೆ ಗಮನಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಕೋಲಾರದಲ್ಲಿ ಕುಡಿಯುವ ನೀರಿಗಾಗಿ ಎರಡೂ ಕೆರೆಗಳಲ್ಲಿ ಒಂದು ತೊಟ್ಟು ನೀರು ಇಲ್ಲ. ಅಲ್ಲಿರತಕ್ಕದ್ದು ಕೊಳವೆ ಬಾವಿ. ಬೆಳಿಗ್ಗೆ ಹಾಕಿದಂತಹ ಕೊಳವೆ ಬಾವಿಯಲ್ಲಿ ಸಾಯಂಕಾಲದೊಳಗೆ ನೀರು ಇರುವುದಿಲ್ಲ, ನೀರು ಇಂಗಿ ಹೋಗುತ್ತಿದೆ. ಅದರಿಂದಾಗಿ ಅಷ್ಟೋ-ಇಷ್ಟೋ ಶಾಶ್ವತವಾದಂತಹ ಪರಿಹಾರವನ್ನು ಒದಗಿಸಬೇಕಾಗಿದ್ದರೆ, ಆ ಹೂಳು ತುಂಬಿರತಕ್ಕಂತಹ, ನೀರು ಸರಬರಾಜಿಗೇ ಮೀಸಲಾಗಿರತಕ್ಕಂತಹ ಆ ಎರಡು ಕೆರೆಗಳು ಏನಿವೆ ಅಲ್ಲಿ ಹೂಳು ಎತ್ತಿದರೆ ಮಾತ್ರ ಮುಂದೆ ಬರತಕ್ಕ ಮುಂಗಾರಿನಲ್ಲಿಯಾದರೂ ಕೂಡ ನೀರು ಶೇಖರಣೆ ಆಗುತ್ತದೆ. ಆ ಕೊಳವೆ ಬಾವಿಗಳಲ್ಲೂ ಕೂಡ ನೀರು ಬರುತ್ತದೆ ಮತ್ತು ಕೆರೆಗಳ ನೀರು ಶೇಖರಣಾ ಸಾಮರ್ಥ್ಯವೂ ಕೂಡ ಹೆಚ್ಚಿಗೆ ಆಗುತ್ತದೆ. ಆ ಕಾರಣದಿಂದ ತತ್‌ಕ್ಷಣದಲ್ಲಿ ಒಂದು ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿ ಎನ್ನತಕ್ಕ ಮನವಿಯನ್ನು ನಾವು ಮಾಡಿದ್ದೆವು. ಈಗ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಮಾನ್ಯ ಕಂದಾಯ ಮಂತ್ರಿಗಳಿಗೆ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ. ನೀವು ಬರ ಪರಿಹಾರ ನಿಧಿಯಿಂದ ಹಣವನ್ನು ಕೊಡುತ್ತೀರೋ ಅಥವಾ ಯಾವ ನಿಧಿಯಿಂದ ಕೊಡುತ್ತೀರೋ ತಕ್ಷಣದಲ್ಲಿಯೇ ಒಂದು ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿದರೆ ಅದರಲ್ಲಿ ಪೂರ್ತಿಯಾಗಿ ಹಣ ಖರ್ಚು ಆಗುತ್ತದೆ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಮಳೆ ಬಂದ ತಕ್ಷಣ ಕೆಲಸ ನಿಂತು ಹೋಗುತ್ತದೆ. ಆದ್ದರಿಂದ ನೀವು ಯಾವುದಾದರೂ ಒಂದು ಯೋಜನೆಯಡಿಯಲ್ಲಿ ಅಲ್ಲಿಗೆ ಎಷ್ಟು ಹಣ ಸಾಕಾಗುತ್ತದೋ ಅದನ್ನು ಕೊಡಿ. ನಾವು ಕೇಳಿರತಕ್ಕದ್ದು ಒಂದು ಕೋಟಿ ರೂಪಾಯಿಗಳು, ಅಷ್ಟಾದರೂ ಕೂಡ ಬಿಡುಗಡೆಯಾದರೆ ಆ ಕೆರೆಯ ನೀರು ಸಂಗ್ರಹಣ ಸಾಮರ್ಥ್ಯವನ್ನು ಹೆಚ್ಚಿಸಿ ನೀರಿನ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಅದರಿಂದ ದಯವಿಟ್ಟು ತಮ್ಮಿಂದ ತತ್‌ಕ್ಷಣ ಈಗಲೇ ಹಣ ಬಿಡುಗಡೆ ಆಗಬೇಕಾಗಿದೆ. ಈಗಾಗಲೇ ಮುನಿಸಿಪಾಲಿಟಿಯಲ್ಲಿರತಕ್ಕ ಅಲ್ಪ ಸ್ವಲ್ಪ ಹಣದಲ್ಲಿ ಕೆಲಸ ಪ್ರಾರಂಭ ಆಗಿದೆ. ಅದನ್ನು

ಮುಂದುವರಿಸಿಕೊಂಡು ಹೋಗಬೇಕಾಗಿದ್ದರೆ ಮುನಿಸಿಪಾಲಿಟಿಯಲ್ಲಿ ಸಾಕಷ್ಟು ಹಣ ಇಲ್ಲ. ಆದ್ದರಿಂದ ಈಗ ತತ್‌ಕ್ಷಣ ಒಂದು ಕೋಟಿ ರೂಪಾಯಿಗಳನ್ನಾದರೂ ತಾವು ಯಾವುದೇ ಯೋಜನೆಯಡಿಯಲ್ಲಿ ಆಗಲೀ ಬಿಡುಗಡೆ ಮಾಡಿ ನಡೆಯುತ್ತಿರತಕ್ಕ ಕೆಲಸವನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾವು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಕುಡಿಯುವ ನೀರಿಗೆ ಈ ಬೇಸಿಗೆಯಲ್ಲಿ ಎಲ್ಲಾ ಕಡೆ ಹಾಹಾಕಾರವಿದೆ. ಪ್ರತಿ ಬೇಸಿಗೆಯಲ್ಲೂ ಇದು ಮರುಕಳಿಸತಕ್ಕಂಥ ಬೆಳವಣಿಗೆಯಾದ್ದರಿಂದ ಡೀಸಿಲ್ಟಿಂಗ್ ಮಾಡಬೇಕೆಂದು ನಾವೇನು ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ, ಅದು ಜಾರಿಗೆ ಬರಲಿಕ್ಕೆ ವಿಶ್ವ ಬ್ಯಾಂಕಿನ ಜೊತೆಯಲ್ಲಿ ನಾವು ಸಂಧಾನಗಳನ್ನು ಮಾಡುತ್ತಿದ್ದೇವೆ. ವಿಶ್ವ ಬ್ಯಾಂಕ್ ಟೀಮ್ ಕಳೆದ ಎರಡು ದಿನಗಳಿಂದ ಬೆಂಗಳೂರಿನಲ್ಲಿದೆ, ಅವರು ಅಧಿಕಾರಿಗಳ ಜೊತೆ ಮಾತನಾಡುತ್ತಿದ್ದಾರೆ. ಆದರೆ ಅದ್ಕಕೆ ನಾವು ಕಾಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಯಾವುದಾದರೂ ಯೋಜನೆಯಲ್ಲಿ, ಎಷ್ಟು ಹಣ ಬೇಕು ಎನ್ನತಕ್ಕದ್ದನ್ನು ಪರಿಶೀಲನೆ ಮಾಡಿ ತತ್‌ಕ್ಷಣದಲ್ಲಿ ಅದು ಪಟ್ಟಣ ಪ್ರದೇಶ ಆಗಿರಬಹುದು ಅಥವಾ ಗ್ರಾಮೀಣ ಪ್ರದೇಶ ಆಗಿರಬಹುದು, ಎಲ್ಲೆಲ್ಲಿ ಕುಡಿಯುವ ನೀರಿಗೆ ತೊಂದರೆಯಿದೆ ಅಲ್ಲೆಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪರಿಷತ್‌ನ ಚೀಫ್ ಆಫೀಸರ್ಸ್ ಅವರುಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುತ್ತದೆ. ಸರ್ಕಾರ ದುಡ್ಡು ಕೊಡಬೇಕೆಂದು ಹೇಳಿದರೆ ಅದಕ್ಕೆ ಸಾಧ್ಯ ಇಲ್ಲ. ಸಮರೋಪಾದಿಯಲ್ಲಿ ಅವರು ಮುಂದೆ ಹೋಗಿ ಅಪ್ರೋಪ್ರಿಯೇಟ್ ಸ್ಟೆಪ್ಸ್ ಅನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ನಾವು, ವಿಧಾನಸೌಧದಿಂದ ಅಪ್ರೋಪ್ರಿಯೇಟ್ ಅವರಿಗೆ ಸಪೋರ್ಟ್ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ: ನಾನು ಸ್ಪೆಸಿಫಿಕ್ ಆಗಿ ಹೇಳುತ್ತಿರುವುದು, ಆ ಕೆರೆಗಳಲ್ಲಿ ಹೂಳು ಎತ್ತುವುದಕ್ಕೆ ಸಂಬಂಧಪಟ್ಟಹಾಗೆ ಇವತ್ತು ಕೆಲಸ ನಡೆಯುತ್ತಿರುವ ಕಾರಣದಿಂದ ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಹಣ ಬಿಡುಗಡೆ ಮಾಡಿ ಎನ್ನುವ ಮಾತನ್ನು ನಾವು ಹೇಳುತ್ತಿರತಕ್ಕದ್ದು.

ಶ್ರೀ ಎಸ್.ಎಂ. ಕೃಷ್ಣ: ನಾವು ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಕುದವನಹಳ್ಳಿ: ಮಾನ್ಯ ಸಭಾಧ್ಯಕ್ಷರೆ, ನಾನು ಕೇಳಿದ್ದು, ಕೋಲಾರದಲ್ಲಿ ಒಂದೂವರೆ ಲಕ್ಷ ಜನಸಂಖ್ಯೆ ಇದೆ. ಅಲ್ಲಿ ಎರಡೂ ಕೆರೆಗಳೂ ಬತ್ತಿ ಹೋಗಿವೆ. ಪ್ರತಿ ವರ್ಷದಲ್ಲೂ ಅಲ್ಲಿ ಅಷ್ಟೋ ಇಷ್ಟೋ ನೀರು ಇರುತ್ತಿತ್ತು. ಆಗ ನಮಗೆ ಕುಡಿಯುವ ನೀರಿಗೆ ತೊಂದರೆ ಇರಲಿಲ್ಲ. ಈ ಸಾರಿ ನೂರು ಬೋರ್‌ವೆಲ್‌ಗಳಿಗೆ ಮೋಟಾರ್‌ಗಳನ್ನು ಅಳವಡಿಸಿದ್ದರೂ ಕೂಡ ನಮಗೆ ನೀರಿಗೆ ಬಹಳ ತೊಂದರೆ ಆಗಿದೆ. ಇದೊಂದು ಅವಕಾಶ ಇದೆ. ಆ ಕೆರೆಗಳಲ್ಲಿ ನೀರು ಇಲ್ಲದೇ ಇರುವುದರಿಂದ, ಅಲ್ಲಿ ಆರು ಅಡಿ ಮಣ್ಣು ಎತ್ತಿದರೆ ಎರಡು ವರ್ಷಕ್ಕೆ ಆಗುವಷ್ಟು ನೀರು ಸಂಗ್ರಹ ಆಗುತ್ತದೆ. ಕೆರೆಗಳು ತುಂಬಿದರೆ ಎರಡು ವರ್ಷಗಳ ಕಾಲ ಕೋಲಾರ ಪಟ್ಟಣದಲ್ಲಿ ನೀರಿಗೆ ತೊಂದರೆ ಆಗುವುದಿಲ್ಲ. ಆದ್ದರಿಂದ ಅದಕ್ಕೇ ನಾವು ಕಾಯುತ್ತಿದ್ದರೆ ಕಷ್ಟ ಆಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ: ಅದಕ್ಕೇ ಕಾಯುತ್ತೇನೆಂದು ನಾನು ಕೂಡ ಹೇಳಲಿಲ್ಲ. ಅದಕ್ಕೆ ನಾವು ಕಾಯುವುದಕ್ಕೆ ಆಗುವುದಿಲ್ಲ. ಆ ವಿಚಾರಕ್ಕೆ ಯಾರೂ ಕಾಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವು ಬೇರೆ ಹಣ ಬಿಡುಗಡೆ ಮಾಡಿ ಈ ಕೆಲಸವನ್ನು ಮುಂದುವರಿಸಬೇಕು ಎಂದು ನಾನು ಹೇಳಿದ್ದು.

ಶ್ರೀ ಎ. ನಾಗರಾಜ್: ಮಾನ್ಯ ಸಭಾಧ್ಯಕ್ಷರೆ, ಈ ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಎಂಟು ದಿವಸಗಳ ಕೆಳಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಒಂದು ವಿಶೇಷ ಸಭೆಯಲ್ಲಿ, ಕುಡಿಯುವ ನೀರಿನ ಸರಬರಾಜಿಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ಮಾಡಿ ಪ್ರತಿ ಕ್ಷೇತ್ರಕ್ಕೂ 25ರಿಂದ 30 ಲಕ್ಷ ಕೊಟ್ಟಿದ್ದಾರೆ. ಕೋಲಾರ ಕ್ಷೇತ್ರಕ್ಕೆ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಇಮ್ಮಿಡಿಯೇಟ್ ಆಗಿ ಡೈವರ್ಟ್ ಮಾಡಿ ಹೂಳು ಎತ್ತಿಸುವಂತಹ ಕಾರ್ಯವನ್ನು ಮಾಡಬಹುದು.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಹಳ್ಳಿಗಳಲ್ಲಿ ಏನು ಮಾಡುವುದು?

ಶ್ರೀ ಎ. ನಾಗರಾಜ್: ಎಲ್ಲದಕ್ಕೂ ಹೊಂದಾಣಿಕೆ ಮಾಡಿಕೊಳ್ಳಬಹುದು. ಕೋಲಾರ ಕ್ಷೇತ್ರಕ್ಕೆ 35 ಲಕ್ಷ ರೂಪಾಯಿಗಳು ಬಿಡುಗಡೆ ಆಗಿದೆ. ಅರ್ಬನ್‌ಗೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಸುಮಾರು 45 ಲಕ್ಷ ರೂಪಾಯಿಗಳನ್ನು ಕೋಲಾರ ಕ್ಷೇತ್ರಕ್ಕೆ ಕೊಟ್ಟಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಇನ್ನು ಉಳಿದ ಹಳ್ಳಿಗೆ ಏನು ಮಾಡುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ: ನಾನು ಕೋಲಾರ ಜಿಲ್ಲೆಯನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿಲ್ಲ. ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಇವೆಲ್ಲ ಒಣ ಪ್ರದೇಶಗಳು ಎಂದು ಸರ್ಕಾರ ಕಂಡುಕೊಂಡಿದೆ. ಆದ್ದರಿಂದ ನಾವು ಕೊಡತಕ್ಕಂತಹ ಹಣ ಎಲ್ಲಾ ತಾಲ್ಲೂಕುಗಳಿಗೂ ಹಂಚಿಕೆ ಆಗಬೇಕು. ಅದರಲ್ಲಿ ಒಂದು ಭಾಗ ಕೋಲಾರಕ್ಕೂ ಸಿಗುತ್ತದೆ ಎನ್ನತಕ್ಕಂತದ್ದನ್ನು ನಾನು ಹೇಳುತ್ತಿದ್ದೇನೆ.

6. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) ಮಾನ್ಯ ಛೇರ್ಮನ್‌ರವರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಉಭಯ ಸದನಗಳನ್ನು ಉದ್ದೇಶಿಸಿ ಈ ಸದನದಲ್ಲಿ ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕಾಗಿ ಎಲ್ಲಾ ಮಾನ್ಯ ಸದಸ್ಯರುಗಳು ಧನ್ಯವಾದಗಳನ್ನರ್ಪಿಸಿರುವಂತೆ ನಾನೂ ಸಹ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಸುವಂಥ ಸಂದರ್ಭದಲ್ಲಿ ಹಿರಿಯ ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಒಂದು ಮಾತನಾಡಿದ್ದರು. ಏನೆಂದರೆ, ರಾಜ್ಯಪಾಲರ ಭಾಷಣ, ರಾಜ್ಯ ಸರ್ಕಾರ ಮುಂದಿನ ಅವಧಿಯಲ್ಲಿ ಏನೇನು ಮಾಡುತ್ತದೆ ಎಂಬುದರ ದಿಕ್ಸೂಚಿ ಎಂದರು. ಈ ದಿಕ್ಸೂಚಿಯನ್ನು ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ ನಂತರ ಆಯವ್ಯಯ ಪತ್ರದ ಮಂಡನೆಯಾಗುತ್ತದೆ. ಅದರಲ್ಲಿ ಮುಂದಿನ ಒಂದು ವರ್ಷದಲ್ಲಿ ರಾಜ್ಯ ಸರ್ಕಾರದವರು ಏನನ್ನು ಮಾಡುತ್ತಾರೆಂಬುದನ್ನು ಈಗಾಗಲೇ ಹೇಳಿದ್ದಾರೆ. ಆದುದರಿಂದ, ಬಜೆಟ್ ಮಂಡನೆಯಾದ ನಂತರ ಈ ಕುರಿತು ಚರ್ಚಿಸುವುದು ಎಷ್ಟು ಪ್ರಸ್ತುತ ಎನ್ನುವುದನ್ನು ನಾವು ಆಲೋಚಿಸಬೇಕಾಗುತ್ತದೆ.